## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನಲ್ಲಿ ದಿನಾಂಕ: 24-11-2020 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21 /21-09-2020 ರ ಆದೇಶದಂತೆ ದಿನಾಂಕ: 21-09-2020 ರವರ ಆದೇಶದಂತೆ ದಿನಾಂಕ: 24-11-2020 ರಂದು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ಸುಬ್ರಮಣ್ಯ ದೇವಸ್ಥಾನದ ಛತ್ರದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಸಭೆಯು ದಿನಾಂಕ: 24-11-2020 ರಂದು ನಡೆಯಿತು.

**ಸಭೆಗೆ ಹಾಜರಿದ್ದವರ ವಿವರಗಳು**

1) ಮಾನ್ಯ ಶ್ರೀ.ಎನ್.ಎ ಹ್ಯಾರಿಸ್. ಶಾಸಕರು. ಶಾಂತಿನಗರ ವಿಧಾನ ಸಭಾ ಕ್ಷೇತ್ರ , ಅಧ್ಯಕ್ಷರು
2) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
3) ಶ್ರೀ. ಮೂರ್ತಿ, ವಾರ್ಡ್ ಸಮಿತಿಯ ಕಾರ್ಯದರ್ಶೀ , ಸಹಾಯಕ ಅಭಿಯಂತರರು ಹಾಗೂ ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ವಿದ್ಯುತ್, ಘನತಾಜ್ಯ ವಿಭಾಗ, ಅಧಿಕಾರಿಗಳು, ಮತ್ತು *BWSSB* ಬೆಸ್ಕಾಂ, ಸಂಚಾರಿ/ಅರಕ್ಷಕರ ಠಾಣೆ, ಸಬ್ ಇನ್ಸ್ ಪೆಕ್ಟರ್ ಮತ್ತು ಸಿಬ್ಬಂದಿ ಇಲಾಖೆಯ ಅಧಿಕಾರಿಗಳು ಹಾಜರಿದ್ದರು
4) ವಾರ್ಡ್ ಸಮಿತಿ ಸದಸ್ಯರು,
   1) ಶ್ರೀಮತಿ. ಆಶಾ ಆಲ್ವಿನ್
   2) ಶ್ರೀಮತಿ. ಗಾಯತ್ರಿ,
   3) ಶ್ರೀ, ರಮೇಶ್ ರೆಡ್ಡಿ,
   4) ಶ್ರೀ. ನಂದೀಶ್ ಗೌಡ,
   5) ಶ್ರೀ . ಉಮೇಶ್,
   6) ಶ್ರೀ. ಶ್ರೀನಿವಾಸ ನಾಯ್ಡು ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರಿಗೆ ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿಕರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ ದಿನಾಂಕ07/11/2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಯನ್ನು ನೋಡೆಲ್ ಅಧಿಕಾರಿಯವರು ಸಂಕ್ಷಿಪ್ತವಾಗಿ ಒದುತ್ತಾ .ಒಂದೊಂದು ವಿಷಯವನ್ನು ಹಾಗೂ ಅದರ ಕ್ರಮ ತೆಗೆದುಕೊಂಡಿರುವ ಬಗ್ಗೆ ಚರ್ಚಿಸಲಾಯಿತು.

**ಮುಂದುವರೆದು ಮೊದಲನೇಯದಾಗಿ,** ನೀರು ಮತ್ತು ಒಳಚರಂಡಿ ಸಮಸ್ಯೆ, 10ನೇ ಮುಖ್ಯರಸ್ತೆಯಲ್ಲಿ ರಸ್ತೆ ಕಾಮಗಾರಿ ಇನ್ನೂ ಪೂರ್ಣಗೊಂಡಿಲ್ಲ. ನೀರಿನ ಪೈಪ್ ಅಳವಡಿಸಿಲ್ಲ ಇದರಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗಿರುತ್ತದೆ. ಈ ಬಗ್ಗೆ BWSSB ಅಧಿಕಾರಿಯವರಾದ ಶ್ರೀ. ಕೇಶವ ಹೆಗಡೆ ರವರು ಉತ್ತರಿಸುತ್ತಾ ಒಂದು ಬಂಡೆ ಬಂದಿರುವ ಕಾರಣದಿಂದ ತಡವಾಗಿರುತ್ತದೆ ಇನ್ನೂ ಒಂದು ವಾರದಲ್ಲಿ ಕೆಲಸವನ್ನು ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.

ಅದನಂತರ ಶ್ರೀ. ಮೂರ್ತಿ AE ಬಿಬಿಎಂಪಿ ರವರು ಉತ್ತರಿಸುತ್ತಾ BWSSB ರವರ ಕೆಲಸ ಪೂರ್ಣಗೊಂಡ ತಕ್ಷಣ 10ನೇ ರಸ್ತೆಗೆ ಡಾಂಬರೀಕರಣ ಮಾಡಲಾಗುವುದು. ಎಂದು ತಿಳಿಸಿರುತ್ತಾರೆ. ಮಾನ್ಯ ಶಾಸಕರು ಅಧಿಕಾರಿಗಳಿಗೆ ಶ್ರೀಘ್ರವಾಗಿ ಕೆಲಸವನ್ನು ಪೂರ್ಣಗೊಳಿಸಬೇಕೆಂದು ಎಚ್ಚರಿಸಿದರು.

**ಎರಡನೇಯದಾಗಿ**, ಸಾರ್ವಜನಿಕರ ಕುಡಿಯುವ ನೀರಿನ (**PUBLIC TAP**) ಕೊಳಾಯಿ ಹಾಳಿರುವ ಬಗ್ಗೆ ಚರ್ಚಿಸಲಾಗಿ ಹಿಂದಿನ ಸಭೆಯಲ್ಲಿ ಕುಡಿಯುವ ನೀರಿನ ನಲ್ಲಿಯ ದುರಸ್ಥಿಯ ಬಗ್ಗೆ ವಿಷಯ ಪ್ರಸ್ತಾಪಿಸಲಾಗಿರುತ್ತದೆ. ಇದರ ಬಗ್ಗೆ ಮಾನ್ಯ ಶಾಕಸರು BWSSB AEE ನಾಗರಾಜ್ ರವರಿಗೆ ನಲ್ಲಿಯ ದುರಸ್ಥಿಯ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಕೇಳಲಾಗಿ ಇದಕ್ಕೆ BWSSB ನಾಗರಾಜ್ ರವರು ಉತ್ತರಿಸುತ್ತಾ ಬೀದಿ ಬದಿಯ ನಲ್ಲಿಗಳನ್ನು ತೆರವುಗೊಳಿಸಲು ಆದೇಶವಾಗಿರುತ್ತದೆ.

**ಮೂರನೇಯದಾಗಿ**, ಮರಗಳ ಟ್ರಿಮಿಂಗ್ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ ಮಾನ್ಯ ಶಾಕಸರು ಅರಣ್ಯ ವಿಭಾಗದ ಶ್ರೀ. ದೇವರಾಜ್ ರವರಿಗೆ ಯಾಕೆ? ಮರಗಳ ಟ್ರಿಮಿಂಗ್ ಮಾಡಿರುವುದಿಲ್ಲ ವೆಂದು ಕೇಳಲಾಗಿ ಶ್ರೀ. ದೇವರಾಜ್ ರವರು ಉತ್ತರಿಸುತ್ತಾ ಅದಷ್ಟು ಶ್ರೀಘ್ರವಾಗಿ ಮರಗಳ ಟ್ರಿಮಿಂಗ್ ಹಾಗೂ ಮರಗಳ ಕೊಂಬೆಗಳನ್ನು ತೆರವುಗೊಳಿಸವುದಾಗಿ ತಿಳಿಸಿದರು.

**ನಾಲ್ಕನೇಯದಾಗಿ**. ಸಂಚಾರ ಸಮಸ್ಯೆಯ ಬಗ್ಗೆ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿ ಇದರ ಬಗ್ಗೆ ಮಾನ್ಯ ಶಾಸಕರು ಹಲಸೂರು ಅರಕ್ಷಕರ ಠಾಣೆಯಿಂದ ಬಂದಿದಂತಹ ಸಬ್‌ಇನ್ಸ್‌ಪೆಕ್ಟರ್ ರವರಿಗೆ ಇತ್ತೀಚೆಗೆ ವಾರ್ಡ್‌ನಲ್ಲಿ ಪುಂಡರು ಹಾಗೂ ಇತರ ಅನಧಿಕೃತ ಚಟುವಟಿಕೆ ಆಗುತ್ತಿರುವುದಕ್ಕೆ ಏನು ಕ್ರಮ ತೆಗೆದುಕೊಂಡಿರುತ್ತೀರಿ. ಎಂದು ಕೇಳಿದರು. ಇದಕ್ಕೆ ಉತ್ತರಿಸುತ್ತಾ ಹಲಸೂರು ಠಾಣೆಯ ಸಬ್‌ಇನ್ಸ್‌ಪೆಕ್ಟರ್ ರವರು ಚೀತಾ ಮತ್ತು ಹೋಯ್ಸಳಗಸ್ತು ತೀರುಗುವುದನ್ನು ಹೆಚ್ಚಿಸಿ ಅನಧಿಕೃತ ಚಟುವಟಿಕೆಗಳನ್ನು ತಡೆಗಟ್ಟುವ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಈ ಸಭೆಯಲ್ಲಿ ಪಾಲಿಕೆಯ ಬಾಲಕಿಯರ ಪ್ರೌಢಶಾಲೆ ಆಟದ ಮೈದಾನದಲ್ಲಿ ಅಕ್ರಮ ಚಟುವಟಿಕೆಗಳು ನಡೆಯುತ್ತಿದೆ ಎಂದು ನೋಡೆಲ್ ಅಧಿಕಾರಿಯವರು ಮಾನ್ಯ ಶಾಸಕರಿಗೆ ತಿಳಿಸಿದರು ಈ ವಿಷಯಕ್ಕೆ ಸಂಬಂದಿಸಿದ ಆರಕ್ಷರ ಠಾಣೆ ಸಬ್‌ಇನ್ಸ್‌ಪೆಕ್ಟರ್ ರವರನ್ನು ಏನು ಕ್ರಮ ತೆಗೆದುಕೊಂಡಿರುತ್ತೀರಿ ಎಂದು ಕೇಳಿದರು ಹಾಗೂ ಆಟದ ಮೈದಾನದಲ್ಲಿ ಪಾಲಿಕೆಯ ವಿದ್ಯುತ್ ವಿಭಾಗದ ಶ್ರೀ ಮಂಜಪ್ಪ J.E. ರವರಿಗೆ ಆಟದ ಮೈದಾನದಲ್ಲಿ ವಿದ್ಯುತ್ ಕಂಬಗಳನ್ನು ನೆಟ್ಟು ವಿದ್ಯುತ್ ದೀಪಗಳನ್ನು ಅಳವಡಿಸಲು ತಿಳಿಸಿರುತ್ತಾರೆ ಇದಕ್ಕೆ ಉತ್ತರವಾಗಿ ಶ್ರೀ ಮಂಜಪ್ಪ ರವರು ಆಟದ ಮೈದಾನಕ್ಕೆ ಖುದ್ದಾಗಿ ಬೇಟಿ ಮಾಡಿ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ.

ಮಾನ್ಯ ಶಾಸಕರು ಆಟದ ಮೈದಾನಕ್ಕೆ CCTV ಯನ್ನು ಅಳವಡಿಸಲು ತಿಳಿಸಿರುತ್ತಾರೆ.

ವಾರ್ಡಿನಲ್ಲಿ ಉಬ್ಬುಗಳು ಹೆಚ್ಚಾಗಿರುತ್ತದೆಂದು ನೋಡೆಲ್ ಅಧಿಕಾರಿಯವರು ಮಾನ್ಯ ಶಾಸಕರ ಗಮನಕ್ಕೆ ತಂದು ಇದರ ಬಗ್ಗೆ ಮಾನ್ಯ ಶಾಸಕರು PSI ಹಲಸೂರು ಸಂಚಾರಿ ಪೋಲೀಸ್ ಠಾಣೆ ರವರಿಗೆ ರಸ್ತೆಯಲ್ಲಿ ಎಲ್ಲಾ ಅಗತ್ಯವಿಲ್ಲದ ಉಬ್ಬುಗಳನ್ನು ತೆರವುಗೊಳಿಸಲು ಸೂಚಿಸಿರುತ್ತಾರೆ.

ವಾರ್ಡಿನಲ್ಲಿರುವ ಸಿಟಿನೇಸ್ಟ್ ಇಂದಿರಾನಗರ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಅನ್ಯೆತಿಕ ಚಟುವಟಿಕೆಗಳು ಹೆಚ್ಚಾಗಿರುವ ಕಾರಣದಿಂದ ಮಾನ್ಯ ಶಾಸಕರು ಪಾಲಿಕೆಯ ವಿದ್ಯುತ್ ವಿಭಾಗದಲ್ಲಿ JE ಆಗಿರುವ ಶ್ರೀ. ಮಂಜಪ್ಪ ರವರಿಗೆ ಬೀದಿ ದೀಪ ಹಾಗೂ CCTV ಗಳನ್ನು ಅಳವಡಿಸಲು ಸೂಚಿಸಿದರು.

ಐದನೇಯದಾಗಿ ಕಸದ ಸಮಸ್ಯೆಯ ಬಗ್ಗೆ ಹಿಂದಿನ ಸಭೆಯಲ್ಲಿ ವಾರ್ಡಿನ ಸದಸ್ಯರಾದ ಆಶಾ ಅಲ್ಬಿನ್ ರವರು ಮೊಟಪ್ಪನ ಪಾಳ್ಯದಲ್ಲಿ ಕಸ ವಿಂಗಡಣೆಯು ಸರಿಯಾಗಿ ಆಗುತ್ತಿಲ್ಲವೆಂದು ಹಾಗೂ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸುತ್ತಿಲ್ಲವೆಂದು ತಿಳಿಸಿರುತ್ತಾರೆ.

ಈ ಬಗ್ಗೆ ಮಾನ್ಯ ಶಾಕಸರು ಪಾಲಿಕೆಯ AEE ಅಪ್ಪುರಾಜ್ ರವರಿಗೆ ಕಸ ವಿಂಗಡಣೆ ಬಗ್ಗೆ ವಾರ್ಡಿನ ನಾಗರೀಕರಿಗೆ ಅರಿವು ಮೂಡಿಸಬೇಕೆಂದು ಹಾಗೂ ದಿನ ನಿತ್ಯ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲು ಸೂಚಿಸಿರುತ್ತಾರೆ. ಈ ಬಗ್ಗೆ ಸಗಾಯರಾಜ್ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾರ್ಡಿನಲ್ಲಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಮಾಡಲಾಗುತ್ತದೆ ತಾವು ಯಾವ ರಸ್ತೆ ಬೀದಿ ವಿಳಾಸ ನೀಡಿದ್ದಲ್ಲಿ ಅಲ್ಲಿಗೆ ನಮ್ಮ ಸ್ವಚ್ಛತೆಗಾರರನ್ನು ಕಳುಹಿಸಿ ಸೊಳ್ಳೆ ನಿಯಂತ್ರಣ ಔಷಧಿಯನ್ನು ಸಿಂಪಡಿಸಲಾಗುವುದೆಂದು ತಿಳಿಸಿದರು.

ತದನಂತರ ಈಗಿನ ಸಭೆಯ ವಿಷಯಗಳ (ಅಜೆಂಡಾ ) ಈ ಕೆಳಕಂಡಂತೆ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1) ಬೋರ್ ವೇಲ್ ವಿಷಯವಾಗಿ ಮಾನ್ಯ ಶಾಸಕರು BWSSB ಇಂಜಿನಿಯರ್‌ಗಳು ಬೋರ್ ವೇಲ್‌ಗಳನ್ನು ಎಲ್ಲೆಲ್ಲಿ ಅಳವಡಿಸಿದ್ದು ಮುಂದೆ ವಾರ್ಡಿನಲ್ಲಿ. ಎಲ್ಲೆಲ್ಲಿ ಬೋರ್ ವೇಲ್ ಅವಶ್ಯಕತೆ ಇರುವುದನ್ನು ಗುರುತಿಸಿ ವರದಿಯನ್ನು ನೀಡಲು ಸೂಚಿಸಿರುತ್ತಾರೆ.
2) ಕೋವಿಡ್ -19 ರ ಸಂಬಂಧ ಮಾನ್ಯ ಶಾಸಕರು ಮಾತನಾಡುತ್ತಾ ಪ್ರಸ್ತುತ ಕೋವಿಡ್-19 ನಿಯಂತ್ರಣಕ್ಕೆ ಬಂದಿರುತ್ತದೆ ಹಾಗೂ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ ಚಿಕಿತ್ಸೆಗಾಗಿ ಆರೋಗ್ಯ ಸಿಬ್ಬಂದಿಗಾರರ ಕ್ರಮಗೊಂಡಿರುತ್ತಾರೆ ಮತ್ತು ಸಾರ್ವಜನಿಕರು ಸಹ ಮಾಸ್ಕ್ ಮತ್ತು ಸಾಮಾಜಿಕ ಅಂತರವನ್ನು ಕಾಪಾಡಿಕೊಂಡು ಬರಲು ಸೂಚಿಸಿರುತ್ತಾರೆ.
3) ಮಾನ್ಯ ಶಾಕಸರು ನಂದನವನ A/B/C/D ರಸ್ತೆಗಳಿಗೆ ಕೂಡಲೇ ಕಾಂಕ್ರಿಟ್ ಹಾಕಬೇಕೆಂದು ಪಾಲಿಕೆಯ AEE/AE ರವರಿಗೆ ಸೂಚಿಸಿ ಒಂದು ವಾರ ಗುಡವು ನೀಡಿರುತ್ತಾರೆ ಇದಕ್ಕೆ ಉತ್ತರಿಸುತ್ತಾ (EE) ಮಧು ರವರು ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.
4) ವಾರ್ಡಿನ ಸಮಿತಿ ಸದಸ್ಯರಾದ ಆಶಾ ಅಲ್ಬಿನ್ ರವರು ಮೊಟಪ್ಪನಪಾಳ್ಯದಲ್ಲಿ CCTV ಯನ್ನು ಅಳವಡಿಸಲು ಕೋರಿರುತ್ತಾರೆ. ಇದಕ್ಕೆ ಮಾನ್ಯ ಶಾಕಸರು ಸಂಬಂದ ಪಟ್ಟ ಅಧಿಕಾರಿಗೆ ಮೋಟಪ್ಪನ ಪಾಳ್ಯದಲ್ಲಿ CCTV ಯನ್ನು ಅಳವಡಿಸಲು ಸೂಚಿಸಿರುತ್ತಾರೆ.
5) ವಾರ್ಡಿನ ಸದಸ್ಯರಾದ ಶ್ರೀನಿವಾಸ ನಾಯ್ಡು ರವರು ಮಾತಾನಾಡುತ್ತಾ ಮೈನ್ ಚಾನಲ್ ರಸ್ತೆಯ ಎರಡು ಬದಿಯಲ್ಲಿ ವಾಹನಗಳನ್ನು ಪಾರ್ಕಿಂಗ್ ಮಾಡುತ್ತಾ ಸಂಚಾರಕ್ಕೆ ತೊಂದರೆಯಾಗುತ್ತದೆ. ಎಂದು ಮಾನ್ಯ ಶಾಸಕರರಿಗೆ ತಿಳಿಸಿತ್ತಾರೆ, ಮುಂದುವರೆದ್ದು ಶ್ರೀನಿವಾಸ ನಾಯ್ಡು ರವರು ಶಾಂತಿ (PEACE) ಸಮಿತಿಯನ್ನು ವಾರ್ಡಿನಲ್ಲಿ ರಚಿಸಬೇಕೆಂದು ಮಾನ್ಯ ಶಾಸಕರರನ್ನು ಕೋರಿದರು. ಮಾನ್ಯ ಶಾಸಕರು PSI ಕವಿತರವರಿಗೆ ಏನು ಕ್ರಮ ತೆಗೆದುಕೊಂಡಿರುತ್ತೀರಿ ಎಂದು ಕೇಳಲಾಗಿ, ಕವಿತ ಪಿ. PSI ರವರು ಮುಂದಿನ ದಿನಗಳಲ್ಲಿ ಚಾಲನ್ ರಸ್ತೆಯಲ್ಲಿ ಒಂದು ಬದಿ ಪಾರ್ಕಿಂಗ್‌ನ್ನು ತೆರವುಗೊಳಿಸಿ ಸಂಚಾರ ಸುಗಮ ಗೊಳಿಸುವುದಾಗಿ ಹಾಗೂ PEACE ಕಮಿಟಿಯನ್ನು ರಚಿಸಲಾಗಿದೆ ಎಂದು ತಿಳಿಸಿದರು. ಮಾನ್ಯ ಶಾಸಕರು PEACE ಕಮಿಟಿಯ ವಿಚಾರವಾಗಿ ಯಾವ ಸದಸ್ಯರು ಸಕ್ರಿಯವಾಗಿ ಸಮಿತಿಯಲ್ಲಿ ಭಾಗ ವಹಿಸುತ್ತಿಲ್ಲವೋ ಅವರನ್ನು ತೆಗೆದು ಸಮಿತಿಯನ್ನು ಪುನರ್ ರಚಿಸಬೇಕೆಂದು ತಿಳಿಸಿರುತ್ತಾರೆ.

6) ಮಾನ್ಯ ಶಾಸಕರು ಇಲ್ಲೆತೋಪ್ಪು ರಸ್ತೆಯಲ್ಲಿ RO ಪ್ಲಾಂಟ್ ಬೋರಿಯ ಮೇಲೆ ಕಟ್ಟಲಾಗಿ ಅನು ಇನ್ನು ಪ್ರಾರಂಭಿಸದ ಕಾರಣ ಕಟ್ಟಡವನ್ನು ಕೂಡಲೇ ತೆರವುಗೊಳಿಸಿ ಹಿಂದೆ ಇರುವ ಪಾಲಿಕೆಯ ಜಾಗದಲ್ಲಿ ಶೌಚಾಲಯ ಹಾಗೂ RO ಪ್ಲಾಂಟ್‌ನ್ನು ನಿರ್ಮಿಸಲು ಸೂಚಿಸಿರುತ್ತಾರೆ.

7) ಮಾನ್ಯ ಶಾಸಕರು ವಾರ್ಡಿನ ಕಾಮಗಾರಿ ವಿಭಾಗದವರಿಗೆ ರಸ್ತೆಗಳಲ್ಲಿರುವ ಗುಂಡಿಗಳನ್ನು ಕೂಡಲೇ ಮುಚ್ಚಿಸುವುದಕ್ಕೆ ಸೂಚಿಸಿರುತ್ತಾರೆ.

8) ನಾಗರೀಕದಂತಹ ಮಂಜುಳ ರವರು ತಾವು ಪಾಲಿಕೆಯಿಂದ ಬಾಲಕಿಯ ಪ್ರೌಢಶಾಲೆಯ ಬದಿಯಲ್ಲಿ ನಮ್ಮ ಮನೆ ಇರುವುದಾಗಿಯೂ ಬಾಲಕಿಯರ ಪ್ರೌಢ ಶಾಲೆಯಲ್ಲಿ ಇರುವ ಕ್ವಾಟ್ರಸ್ ನ ಹಿಂಬದಿಯಲ್ಲಿ ಕಸ, ಮರ ಗಿಡಗಳು ಹೆಚ್ಚಾಗಿ ಸ್ವಚ್ಚತೆ ಇರುವುದಿಲ್ಲ, ಇದರಿಂದ ನಮಗೆ ಬಹಳ ಅನೂನುಕೂಲತೆ ಯಾಗಿರುತ್ತದೆ ಎಂದು ಹೇಳಿರುತ್ತಾರೆ. ಹಾಗೂ ಪ್ರಸ್ತುತ ಕ್ವಾಟ್ರಸ್ ನಲ್ಲಿ ಅನಧಿಕೃತವಾಗಿ ಬೇರೆಯವರು ವಾಸಿಸುತ್ತೀರುತ್ತಾರೆ. ಎಂದು ತಿಳಿಸಿರುತ್ತಾರೆ, ಮಾನ್ಯ ಶಾಸಕರು ಅನಧೀಕೃತವಾಗಿ ವಾಸಿಸುತ್ತಿರುವುದವರನ್ನು ಕೂಡಲೇ ತೆರವು ಗೊಳಿಸಿ ಕ್ವಾಟ್ರಸ್ ಹಿಂಬದಿಯ ಸ್ಥಳವನ್ನು ಸ್ವಚ್ಛಗೊಳಿಸಲು ಸೂಚಿಸಿರುತ್ತಾರೆ.

ಶ್ರೀ. ನಂದೀಶ್ ಗೌಡ, ವಾರ್ಡ್ ಸಮಿತಿಯ ಸದಸ್ಯರು ಮಾತನಾಡುತ್ತಾ ಮೊಟ್ಟಪ್ಪನ ಪಾಳ್ಯದಲ್ಲಿರುವ ಅಂಜನೇಯ ದೇವಸ್ಥಾನದ ಒಳಚರಂಡಿಯ ನೀರು ಸತತವಾಗಿ ಹೊರ ಹೋಗುತ್ತಿದ್ದು ಇದರಿಂದಾಗಿ ನಾಗರೀಕರಿಗೆ ತೊಂದರೆಯಾಗುತ್ತದೆ ಎಂದು ತಿಳಿಸಿರುತ್ತಾರೆ, ಈ ಬಗ್ಗೆ ಸಂಬಂಧ ಪಟ್ಟ ಅಧಿಕಾರಿಗಳು ಕೂಡಲೇ ಕ್ರಮವಹಿಸಲು ಮಾನ್ಯ ಶಾಸಕರು ಸೂಚಿಸಿರುತ್ತಾರೆ.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಮಾನ್ಯ ಶಾಸಕರು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನೋಡೆಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-89- ಜೋಗುಪಾಳ್ಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು,</u>

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ